ಆದವು. ನಮ್ಮ ಮನೆಯಲ್ಲಿ ಬುಲ್ ಬುಲ್ ಗೂಡು ಮಾಡಿದೆ. ಅದರಲ್ಲಿ ಮರಿಗಳಿವೆ ಎನ್ನುವುದೆಲ್ಲ ಎಷ್ಟು ಖುಷಿಯ ಸಂಗತಿ!

ನಾನು ಗೆಳೆಯರಿಗೆ ಇದನ್ನು ಹೇಳಿದೆ. ಒಂದು ದಿನ ಅವರೆಲ್ಲ ಬಂದಿದ್ದರು. ನಾವೆಲ್ಲಾ ಸ್ವಲ್ಪ ದೂರದಲ್ಲೇ ನಿಂತು ನೋಡುತ್ತಿದ್ದೆವು. ‘ಮರಿಗಳು ಕಪ್ಪಾಗಿ ಮುದ್ದಾಗಿವೆ. ಬಾಯಿ ತೆರೆಯುತ್ತವೆ. ಬಾಯಿಪೂರಾ ಕೆಂಪು. ರೆಕ್ಕೆ ಇನ್ನೂ ಬಂದಿಲ್ಲ. ಐದಾರು ದಿನದಲ್ಲಿ ರೆಕ್ಕೆ ಬಂದು ಹಾರಿ ಹೋಗಬಹುದು’ ಹೀಗೆಲ್ಲಾ ನಮ್ಮ ಮಾತುಕತೆ ಸಾಗಿತ್ತು.

ಅಷ್ಟರಲ್ಲಿ ರಾಮುವಿನ ಪುಟ್ಟ ತಂಗಿ ನನಗೆ ಹಕ್ಕಿಮರಿ ಕಂಡಿಲ್ಲ ಎಂದು ಅಳಲು ತೊಡಗಿದಳು. ಅವಳು ಒಂದನೇ ತರಗತಿ. ಈಗ ಅವಳಿಗೆ ಹಕ್ಕಿಮರಿ ತೋರಿಸಲೇ ಬೇಕಿತ್ತು. ರಾಮು ದಾಸವಾಳ ಗಿಡ ನಿಧಾನವಾಗಿ ಬಗ್ಗಿಸ ತೊಡಗಿದ. ಅಷ್ಟರಲ್ಲಿ ನನ್ನ ಅಪ್ಪ ಹೊರಗೆ ಬಂದರೂ ಅಂತ ಕಾಣುತ್ತದೆ. ‘ಏನು ಮಾಡುತ್ತಾ ಇದ್ದೀರಿ?’ ಎಂದು ದೊಡ್ಡದಾಗಿ ಕೇಳಿದರು. ಅಪ್ಪನ ಗಡಸು ಧ್ವನಿಗೆ ಹೆದರಿದ ರಾಮು ಬಗ್ಗಿಸಿದ ಕೊಂಬೆಯನ್ನು ಪಟಕ್ಕನೆ ಬಿಟ್ಟುಬಿಟ್ಟ. ಕೊಂಬೆ ಒಮ್ಮೆಲೆ ನೆಟ್ಟಗೆ ಆಗುವಾಗ ಗೂಡಿನಲ್ಲಿದ್ದ ಮರಿಗಳು ಪಟಪಟನೆ ಸಿಡಿದು ನೆಲಕ್ಕೆ ಬಿದ್ದವು. ಈ ಸಂಗತಿ ನೆನಪಾದಾಗೆಲ್ಲ ನನಗೆ ಪಾಪ ಎಂತಹ ತೊಂದರೆ ಮಾಡಿದೆವು ಎಂದು ನೋವಾಗುತ್ತದೆ.

ಈಗ ಸುರೇಶ ನಾನು ನೋಡಿರದ ಗೂಡು ತೋರಿಸುತ್ತೇನೆ ಎಂದಿದ್ದಾನೆ. ದೂರದಿಂದ ನೋಡಬೇಕು. ಹಕ್ಕಿಗಳಿಗೆ ಏನೂ ತೊಂದರೆಯಾಗಬಾರದು ಎಂದೆಲ್ಲಾ ಅಂದುಕೊಂಡು ‘ಮತ್ಯಾರನ್ನು ಕರೆಯುತ್ತೀಯ’ ಅಂದೆ, ‘ಗಿರಿಯನ್ನು ಕರೆಯೋಣವಾ’ ಅಂದ. ‘ಬೇರೆ ಯಾರೂ ಬೇಡ. ಅವರೆಲ್ಲ ಬಂದರೆ ಏನು ಮಾಡುತ್ತಾರೆ ಹೇಳಲಾಗದು. ಅವರನ್ನು ಕರೆಯುವುದಾದರೆ ನಾನು ಬರೋದಿಲ್ಲ’ ಎಂದುಬಿಟ್ಟೆ. ‘ಎಷ್ಟು ಹೆದರುತ್ತೀಯ’ ಎನ್ನುತ್ತಾ ನಾವಿಬ್ಬರೇ ಹೋಗೋಣ ಎಂದ.

ಸುರೇಶ ಮುಂದೆ ಹೆಜ್ಜೆ ಹಾಕಿದ. ನಾನು ಹಿಂದೆ. ‘ಅದು ಪುಟ್ಟ ಗಿಡ. ಅದರ ಎಲೆ ಕಾಬಾಳೆ ಗಿಡದ ಎಲೆಯ ಹಾಗೆ ದೊಡ್ಡದಿದೆ. ಒಂದೇ ಎಲೆಯನ್ನು ಮಡಚಿ ಹೊಲಿದು ಗೂಡು ಮಾಡಿಕೊಂಡಿದೆ’ ಎಂದೆಲ್ಲಾ ಹೇಳುತ್ತಾ ಹೋದ. ನನಗೆ ಮತ್ತಷ್ಟು ಕುತೂಹಲವಾಯಿತು. ನಿಲ್ಲು ಎಂದ. ಚಿಕ್ಕದಾಗಿ ಚಿಕ್ ಚಿಕ್ ಧ್ವನಿ ಕೇಳಿತು. ‘ಮರಿಗಳು ಏನೋ ಗದ್ದಲ ಎಬ್ಬಿಸಿವೆ’ ಎನ್ನುತ್ತಾ ಇಣಕಿದ. ಹಾಗೆಯೇ ಹೆದರಿ ಹಿಂದಕ್ಕೆ ಜಿಗಿದ. ‘ಹಾವು ಹಾವು’ ಎಂದ. ನನಗೂ ಭಯವಾಯಿತು. ಗೂಡಿನ ಹತ್ತಿರ ಹಾವಿದೆ ಕಣೋ ಎನ್ನುತ್ತಾ ಆ ಕಡೆಗೇ ನೋಡುತ್ತಿದ್ದ. ಅಷ್ಟರಲ್ಲಿ ಅಷ್ಟೇನೂ ದೊಡ್ಡದಲ್ಲದ ಕೇರೆ ಹಾವೊಂದು ನಮ್ಮ ಮುಂದೆ ಸಳ ಸಳನೆ ಸರಿಯುತ್ತಾ ದೂರ ಹೊರಟು ಹೋಯಿತು.

‘ಹಾವು ನಮ್ಮನ್ನು ನೋಡಿ ಹೆದರಿ ಹೊರಟು ಹೋಯಿತು ನೋಡು’ ಎಂದ ಸುರೇಶ. ‘ಹಕ್ಕಿಮರಿ ಗುಳುಂ ಮಾಡಿತಾ ಏನೋ’ ಎಂದೆ ನಾನು. ಸುರೇಶ ಹೇಳಿದಂತೆ ಎಲೆ ಮಡಚಿ ನಾರಿನಿಂದ ಹೊಲಿದು ಗೂಡು ಕಟ್ಟಿತ್ತು ಹಕ್ಕಿ. ಅವನು ಮುಂದೆ ಬಾಗಿ ನೋಡಿದ. ಮರಿಗಳು ಗೂಡಿನಲ್ಲಿಯೇ ಇವೆ ಎಂದ. ನನಗೆ ಸಮಾಧಾನವಾಯಿತು. ‘ಸರಿ ಸರಿ ಹೋಗೋಣ, ಹಾವಂತೂ ಹೋಯಿತು’ ಅಂದೆ. ‘ನಾವು ಬಂದಿದ್ದೆ ಒಳ್ಳೆಯದಾಯಿತು. ಹಕ್ಕಿಮರಿಗಳು ಉಳಿದವು’ ಎಂದ ಸುರೇಶ.



# ದಂಟಿನ ಗಾಡಿಯ ದೌಲತ್ತು

**ಸಿದ್ದಲಿಂಗಪ್ಪ ಬೀಳಗಿ**
ಕಲೆ: ಸಂತೋಷ್ ಸಸಿಹಿತ್ಲು

ನನ್ನಯ ನೆಚ್ಚಿನ ದಂಟಿನ ಗಾಡಿ
ನಿಲ್ಲದೇ ಊರೆಲ್ಲ ಸುತ್ತುತ್ತೆ ನೋಡಿ
ಸ್ಟೇರಿಂಗ್ ಇಲ್ಲದೇ ತಿರುಗುತ್ತೆ
ಬ್ರೇಕ್ ಇಲ್ಲದೆಯೂ ನಿಲ್ಲುತ್ತೆ

ಇಂಧನವಂತೂ ಬೇಕಿಲ್ಲ
ಇಲ್ಲದ ಖರ್ಚು ಇದಕಿಲ್ಲ
ಪಾರ್ಕಿಂಗ್ ಸಮಸ್ಯೆ ಇಲ್ಲವೇ ಇಲ್ಲ
ಪೊಂವ್ ಪೊಂವ್ ಅನುತ ಸಾಗುವುದಲ್ಲ

ಟಾಯರ್ ಟ್ಯೂಬ್ ಹಾಕಲ್ಲ
ಪಂಚರ್ ಗೊಡವೆಯೇ ಇಲ್ಲವೇ ಇಲ್ಲ
ಟೋಲ್ ಕಟ್ಟುವ ಮಾತೇ ಇಲ್ಲ
ನಾನೊಬ್ಬನೇ ಇದಕೆ ಎಲ್ಲ

ಕಚ್ಚಾ ರಸ್ತೆ ಡಾಂಬರು ರಸ್ತೆ
ಯಾವುದಾದರೂ ಅಷ್ಟೇ ವೇಗ
ಕೈಯನು ಹಿಂದಕೆ ಎಳೆದರೆ ಸಾಕು
ನಿಲ್ಲುವುದದು ಬಲುಬೇಗ

ಊರಲಿ ಎಷ್ಟೇ ವಾಹನ ಇರಲಿ
ನನ್ನಯ ಗಾಡಿಗೆ ಸಮನಲ್ಲ
ದಂಟಿನ ಗಾಡಿಯ ತಂಟೆಗೆ ಬಂದರೆ
ನಾ ಮಾತ್ರ ಸುಮ್ಮನಿರಲ್ಲ



## ಕುಂಚ ಪ್ರಪಂಚ



**ಪ್ರಕೃತಿ ಅಮಿತ್ ಅಡಿಗ**
6ನೇ ತರಗತಿ, ಸುದರ್ಶನ ವಿದ್ಯಾಮಂದಿರ, ಬೆಂಗಳೂರು